ಅಂತ ಎದೆ ಹೊಡೆಯುತ್ತಿದ್ದಳು.

ಶನಿವಾರ, ಆಯ್ತುವಾರ ವಾದಿ ಮನೆಗೆ ಬಂದಾಗ ಯಾರು ಯಾರೋ ಅಪ್ಪನನ್ನ ಹುಡುಕಿಕೊಂಡು ಬರುತ್ತಿದ್ದರು. ರಾಜಕೀಯದಲ್ಲಿ ತನ್ನದೇ ಛಾಪು ಮೂಡಿಸಿದ್ದ ವಾದಿಯ ಅಪ್ಪ ಹೂಂ ಅಂದ್ರೆ ರಾಜಕೀಯದ ಕುಳಗಳೆಲ್ಲ ಕೈಕಟ್ಟಿ ನಿಲ್ಲುತ್ತಿದ್ದರು.

ಆ ಮಟ್ಟಿಗಿನ ಪ್ರಭಾವ ಮತ್ತು ದೂರದವರೆಗೆ ನೆಟ್‌ವರ್ಕ್ ಇತ್ತು. ಈ ಕಾರಣಕ್ಕೆ ತುಂಬಾ ಜನ ರಾಜಕೀಯ ಸಹಾಯ ಕೇಳಿಕೊಂಡೊ, ಇಲ್ಲ ಯಾವುದಕ್ಕೊ ಶಿಫಾರಸು ಮಾಡಿಸಲೆಂದೊ ಬರುತ್ತಿದ್ದರು. ಮನೆಯ ಬಲಕ್ಕೆ ಪುಟ್ಟದಾದ ಕೋಣೆಯನ್ನ ಬಂದವರಿಗಾಗಿ ಭೇಟಿ ಮಾಡಲು ಬಳಸುತ್ತಿದ್ದ. ತನ್ನದೇ ಶಿಫಾರಸು ಪತ್ರ ಮುದ್ರಿಸಿ ಇಟ್ಟುಕೊಂಡಿರುತ್ತಿದ್ದ ಅಪ್ಪ ಅದರ ಮೇಲೆ ಮುತ್ತಿನಂತಹ ಅಕ್ಷರಗಳಿಂದ ಬಂದವರ ಹೆಸರು ಮತ್ತು ಆಗಬೇಕಾದ ಕೆಲಸದ ಕುರಿತು ಖಡಕ್ಕಾಗಿ ಬರೆಯುತ್ತಿದ್ದ. ಓದಿದವರ ಎದೆಗೆ ನಾಟಬೇಕು ಹಾಗೆ.

ಆದರೆ, ಕೆಲವೊಮ್ಮೆ ಅನಿರೀಕ್ಷಿತವಾಗಿ ಪಿಯುಸಿ ಫೇಲಾಗಿ ಊರು ಸೇರಿದ್ದ ಮಾಲಿಂಗ, ಊರಲ್ಲಿ ಹಮಾಲಿ ಮಾಡುತ್ತಿದ್ದ ಸಾಬರ ಹುಡುಗ ಸದ್ದಾಮನಂತಹವರು ಬರುತ್ತಿದ್ದರು!

ಆವಾಗೆಲ್ಲ ಪೊರೆಬಿಚ್ಚಿದ ಹಾವಿನಂತಾಗಿ ಸರಸರನೇ ಮನೆಯಿಡೀ ಸುಮ್ಮನೆ ಅಲೆಯುತ್ತಿದ್ದ.

ಅದೆಂತಹದೋ ಮಿಂಚಿನ ಸಂಚಲನ ಮೈಯೆಲ್ಲ ಪಸರಿಸಿದಂತಾಗಿ ನಿಂತ ಕಾಲು ನೆಲಕ್ಕೆ ತಾಗದಷ್ಟು ಹಗುರವಾಗಿ ಹಾರಾಡುತ್ತಿದ್ದ. ವಿಲಕ್ಷಣ ಸಂತೋಷ ಆತನ ಮುದಿ ಬೀಳುತ್ತಿದ್ದ ಕಣ್ಣುಗಳಲ್ಲಿ ಪಟಪಟಿಸುತ್ತಿತ್ತು.

ಗಡಿಬಿಡಿಮಾಡಿ ಸಿಕ್ಕ ಅಂಗಿ ಮೈಗೇರಿಸಿಕೊಂಡು ಬೈಕು ಹೊರತೆಗೆದು ತ್ರಿಬಲ್ ರೈಡ್ ಹೊರಟು ಬಿಡುತ್ತಿದ್ದ. ಅಪ್ಪ ಗಾಡಿ ಓಡಿಸುತ್ತಿದ್ದರೆ ಕಟ್ಟುಮಸ್ತಾದ ಆ ಹುಡುಗರು ಅಪ್ಪನನ್ನು ಒತ್ತಿ ಕುಳಿತು, ಅಂಬ್ರಿಸಿ ಹಿಡಿದಿರುತ್ತಿದ್ದರು. ಅಪ್ಪ ಕುಶಾಲಿಯಿಂದ ಖುಷಿಯಾಗಿ ಗಾಡಿ ಓಡಿಸುತ್ತಿದ್ದ. ಮನೆಯ ಮೂಲೆ ತಿರುಗೋವರೆಗೂ ಮನೆಯವರೆಲ್ಲ ಒಬ್ಬರಿಗೆ ಕಾಣದಂತೆ ಒಬ್ಬರು ಕದ್ದು ನೋಡಿ ನಿಟ್ಟುಸಿರಾಗುತ್ತಿದ್ದರು.

ವಾದಿಗಂತೂ ಅವರನ್ನ ಕೆಳಗೆ ಕೆಡವಿ, ''ಇನ್ನೊಂದು ಸಲ ನಮ್ ಮನೀ ಕಡೀಗಿ ಕಾಲ ಇಡಬ್ಯಾಡ್ರಲೇ ಲಂಗಸೂಳೆಮಕ್ಕ್ಳ'' ಅಂತಂದು ಕೆಳಗಾಕಿ ಒದಿಬೇಕು ಅನಿಸ್ತಿತ್ತು.

ಆಮ್ಯಾಲಾಮೇಲೆ ವಾದಿ ಊರಿಗೆ ಬರುವದನ್ನೇ ಬಿಟ್ಟ. ಪಿಯುಸಿ ಮುಗಿದು ದೂರದ ಬಳ್ಳಾರಿಯಲ್ಲಿ ಎಂಜಿನಿಯರಿಂಗ್ ಸೀಟು ಸಿಕ್ಕು ಅಲ್ಲೇ ನೆಲೆನಿಂತ. ರಜೆ ಬಂದಾಗಲೂ ಊರಿಗೆ ಕಾಲಿಡಲು ಮನಸು ಬರುತ್ತಿದ್ದಿಲ್ಲ. ಇದ್ಯಾವುದರ ಅರಿವಿಲ್ಲದ ಅಪ್ಪ ವಾರಕ್ಕೆ ಒಮ್ಮೆಯಾದರೂ ಫೋನ್ ಮಾಡಿ ಕುಶಲ ವಿಚಾರಿಸುತ್ತಿದ್ದರು.

ಆ ಕಾಲೇಜಿನ ಟ್ರಸ್ಟಿ ತಮ್ಮದೇ ಪಕ್ಷದ ನಿಯತ್ತಿನ ಕಾರ್ಯಕರ್ತನೆಂದು, ತಾನು ಒಂದು ಮಾತು ಹೇಳಿದರೆ ನಿನ್ನ ಹೂವಿನ ಮೇಲೆ ನಡೆಸುತ್ತಾನೆಂದು ಪದೇಪದೇ ಹೇಳುತ್ತಿದ್ದರೂ, ''ಅದ್ಯಾವುದೂ ಬ್ಯಾಡ, ನೀ ಹಂಗೇಳಿದ್ರೆ ನಾ ಕಾಲೇಜ ಬಿಟ್ಟು ದೇಶಾಂತರ ದುಡ್ಯಾಕ ಹೋತೀನಿ ನೋಡ್'' ಅಂತ ವಾದಿ ಫೋನು ಕತ್ತರಿಸುತ್ತಿದ್ದ.

''ಇವ್ನೆಂತವ್ನಾನ ರೆಕಮೆಂಡ್ ಬೇಕಂತ ಹುಡುಗ್ರು ಬಾಯ್ಬಡ್ಕಂತಾವ'' ಅಂತ ಗುನುಗಿ ಸುಮ್ಮನಾಗುತ್ತಿದ್ದರು.

ಒಂದು ದಿನ ಇದ್ದಕ್ಕಿದ್ದಂತೆ ತಂದೆ ವಿಷ ಕುಡಿದ ಸುದ್ದಿ ವಾದಿಗೆ ಮುಟ್ಟಿದಾಗ ಅವನು ಬಳ್ಳಾರಿಯ ಬಸ್ ಸ್ಟ್ಯಾಂಡಿನ ಮೂಲೆಯ ಪಾರ್ಕಿನಲ್ಲಿ ಪುಜೂಲು ಹೆಜ್ಜೆ ಹಾಕುತ್ತಿದ್ದ. ಸುದ್ದಿ ಕೇಳಿ ಒಮ್ಮೆಲೆ ಎದೆ ಹಗುರವಾದಂತಾಯಿತು!